## ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕೊಳ್ಳೇಗಾಲ

**ಸಿ ಸಿ ಸಂಖ್ಯೆ 1279 /2025**

ಚಾಸಾ 2     ಫ್ರಾಸಾ 3

ಸಾಕ್ಷಿಯ ಹೆಸರು : ಗಣೇಶ್

ತಂದೆಯ ಹೆಸರು : ಶಿವಮಲ್ಲಪ್ಪ

ವಯಸ್ಸು : 42 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಇಕ್ಕಡಹಳ್ಳಿ

ದಿನಾಂಕ 09.07.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ – ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ಚಾಸಾ 3 ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ನಾನು ಎಲ್ಲಾ ದಾಖಲಾತಿಗಳಿಗೆ ಸಹಿ ಮಾಡುತ್ತೇನೆ. ಸಾಕ್ಷಿಯು ನಿಪಿ–1 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–1(ಸಿ) ಎಂದು ಗುರುತಿಸಲಾಯಿತು. ಈಗ್ಗೆ 3–4 ತಿಂಗಳ ಹಿಂದೆ ನಾನು ಕೊಳ್ಳೇಗಾಲದ ಗ್ರಾಮಾಂತರ ಪೊಲೀಸ್ ಠಾಣೆಗೆ ಕೊಳ್ಳೇಗಾಲದ ಗ್ರಾಮಾಂತರ ಪೊಲೀಸ್ ಠಾಣೆಯ ಬಳಿ ಪೊಲೀಸರ ಮನವಿಯ ಮೇರೆಗೆ ನಿಪಿ–1 ದಾಖಲೆಗೆ ಸಹಿ ಮಾಡಿದ್ದೆ. ನಿಪಿ–1 ನ್ನು ಓದಿರುವುದಿಲ್ಲ ಹಾಗೂ ನನಗೆ ಪೊಲಿಸರು ಓದಿ ಹೇಳಿರುವುದಿಲ್ಲ. ಸಾಕ್ಷಿಯು ನಿಪಿ–2 ರಿಂದ ನಿಪಿ–5 ಫೋಟೋಗಳನ್ನು ನೋಡಿ, ತಾನು ಸದರಿ ಫೋಟೋಗಳಲ್ಲಿ ಸರಿಯಾಗಿ ಕಾಣಿಸದೇ ಇರುವ ಕಾರಣ ನಾನು ಇಲ್ಲ ಎಂದು ನುಡಿಯುತ್ತಾರೆ. ನನ್ನ ಸಮಕ್ಷಮ ಪೊಲೀಸರು ಆ ದಿನ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ನ್ಯಾಯಾಲಯದ ಸಮಕ್ಷಮ ಇರುವ ಆರೋಪಿ ನನಗೆ ಗೊತ್ತು ಅವರು ನಮ್ಮ ಗ್ರಾಮದವರು. ನ್ಯಾಯಾಲಯದ ಸಮಕ್ಷಮ ಇರುವ ಮುದ್ದೇಮಾಲು 1 ರಿಂದ 7ನ್ನು ಸಾಕ್ಷಿಯು ನೋಡಿ, ಗುರುತಿಸಿರುವುದಿಲ್ಲ. ಪೊಲೀಸರ ಸಮಕ್ಷಮ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

**(ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಬೇಕೆಂದು ಮನವಿ ಮಾಡಿದ್ದು ಸದರಿ ಮನವಿಯನ್ನು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿಸಲಾಯಿತು.)**

**ಪಾಟೀ ಸವಾಲು : ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿನಾಂಕಃ 29.02.2024ರಂದು ನಾನು ಮತ್ತು ಚಾಸಾ 3 ರವರು ದೊಡ್ಡಿಂದುವಾಡಿ ಸರ್ಕಲ್ ಬಳಿ ಸಂಜೆ 4.30 ಗಂಟೆ ಸಮಯದಲ್ಲಿ ನಿಂತಿದ್ದಾಗ ಪೊಲೀಸರು ಬಂದು ತಮಗೆ ಬಂದ ಮಾಹಿತಿಯನ್ನು ತಿಳಿಸಿ, ಪಂಚರಾಗಬೇಕೆಂದು ಕೋರಿಕೊಂಡಿದ್ದರು ಎಂದರೆ ಸರಿ. ಆ ನಂತರ ನಾನು ಮತ್ತು ಸುರೇಶ್ ರವರು ಪೊಲೀಸ್ ಅಧಿಕಾರಿಗಳ ಜೊತೆ ಇಕ್ಕಡಹಳ್ಳಿ ಕಡೆಗೆ ಹೋಗುವ ಕಚ್ಚಾ ರಸ್ತೆಯ ಮಾರ್ಗವಾಗಿ ಇಕ್ಕಡಹಳ್ಳಿ

ಗ್ರಾಮದ ಕರಿಯನಗುಡ್ಡ ಬಯಲಿನ ಹತ್ತಿರ ಹೋಗಿ ಕಚ್ಚಾ ರಸ್ತೆಯಲ್ಲಿ ಜೀಪ್ ಅನ್ನು ಮರೆಯಾಗಿ ನಿಲ್ಲಿಸಿ ಸಿದ್ದಪ್ಪ ಅಃ ಚಿಕ್ಕ ಬೋಳ ರವರ ಜಮೀನಿನ ನಡುವೆ ನಡೆದಕೊಂಡು ಹೋಗಿದ್ದೆವು ಎಂದರೆ ಸರಿ. ಸಮವಸ್ತ್ರದಲ್ಲಿದ್ದ ಪೊಲೀಸರನ್ನು ನೋಡಿ ಒಬ್ಬ ಆಸಾಮಿ ಸ್ಥಳದಿಂದ  ಓಡಿ ಹೋಗಿದ್ದ ಎಂದರೆ ಸರಿಯಲ್ಲ. ಆ ನಂತರ ಸದರಿ ವ್ಯಕ್ತಿಯ ಹೆಸರು ಸಿದ್ದಪ್ಪ ಅಃ ಚಿಕ್ಕಬೋಳ ಎಂಬುದಾಗಿ ತಿಳಿದು ಬಂದಿತು  ಎಂದರೆ ಸರಿಯಲ್ಲ. ಸದರಿ ಜಮೀನಿನ ಪೂರ್ವ ಭಾಗದಲ್ಲಿ ತೆವರಿನ ಬಳಿ ಹನಿ ನೀರಾವರಿಗೆ ಬಳಸುವ ಕಪ್ಪು ಪೈಪ್ ಗಳು ಇದ್ದ ಸ್ಥಳದಲ್ಲಿ ಪರಿಶೀಲಿಸಿದಾಗ ಒಂದು ಒಂಟಿ ನಳಿಕೆಯ ನಾಡ ಬಂದೂಕು, ಒಂದು ಕ್ರಿಮಿ ನಾಶಕ ಔಷದಿಯ ಅಲ್ಯುಮಿನಿಯಂ  ಡಬ್ಬಿಯಲ್ಲಿ ಸಿಲಿಂಡರ್ ಆಕಾರದ 10 ಬೇರಿಂಗ್ ಬಾಲ್ ಗಳು,  ಒಂದು ಕ್ರಿಮಿ ನಾಶಕ ಔಷದಿಯ ಅಲ್ಯುಮಿನಿಯಂ ಡಬ್ಬಿಯಲ್ಲಿ ಇದ್ದ  10 ಬೇರಿಂಗ್ ಬಾಲ್ ಗಳು, ಮತ್ತೊಂದು  ಒಂದು ಕ್ರಿಮಿ ನಾಶಕ ಔಷದಿಯ ಅಲ್ಯುಮಿನಿಯಂ  ಡಬ್ಬಿಯಲ್ಲಿ 12 ಸೀಸದ ಗುಂಡುಗಳು,  ಪ್ಲಾಸ್ಟಿಕ್ ಡಬ್ಬಿಯಲ್ಲಿ 187 ಸಣ್ಣ ಬಾಲ್ಸ್ ಗಳು, ಒಂದು ನೀಲಿ ಬಣ್ಣದ ಪ್ಲಾಸ್ಟಿಕ್ ಕ್ಲಿಪ್ ಮತ್ತು ಒಂದು ಕಟಿಂಗ್ ಪ್ಲೇಯರ್ ಗಳನ್ನು ನಮ್ಮ ಸಮಕ್ಷಮ ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ. ಸದರಿ ಮಹಜರ್ ಅನ್ನು ಆ ದಿನ 5.00 ರಿಂದ 6.00 ಗಂಟೆಯವರಗೆ ಜರುಗಿಸಲಾಗಿತ್ತು ಎಂದರೆ ಸರಿಯಲ್ಲ. ಸ್ಥಳದಿಂದ ಓಡಿ ಹೋಗಿದ್ದ ವ್ಯಕ್ತಿಯನ್ನು ನಾನು ನೋಡಿದ್ದೆ ಎಂದರೆ ಸರಿಯಲ್ಲ. ಮಹಜರ್ ಜರುಗಿಸುವ ಸಮಯದಲ್ಲಿ ನಿಪಿ-1 ಕ್ಕೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಫೋಟೋಗಳನ್ನು ತೆಗೆಯಲಾಗಿತ್ತು, ಅದರಲ್ಲಿ ನಾನು ಇದ್ದೇನೆ ಎಂದರೆ ಸರಿಯಲ್ಲ.  ಈ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೆ ಎಂದರೆ ಸರಿ.  ನನಗೆ ಎಲ್ಲಾ ವಿಚಾರ ಗೊತ್ತಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.  ನ್ಯಾಯಾಲಯದ ಸಮಕ್ಷಮ ಇರುವ ಮುದ್ದೇಮಾಲುಗಳೇ ಆ ದಿನ ಅಮಾನತ್ತು ಪಡಿಸಿಕೊಂಡ ವಸ್ತುಗಳು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ  ಆರೋಪಿ ಪರ ಶ್ರೀ ಎಂ ಕೆ ಎಸ್ ವಕೀಲರಿಂದ**

ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇರುವುದಿಲ್ಲ**

( ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತಲೇಖನದಿಂದ ಬೆರಳಚ್ಚು  ಪಡಿಸಲಾಯಿತು.)

ಓ ಹೇ ಕೇ ಸ ಇದೆ,

(ಕಾವ್ಯಶ್ರೀ. ಎಂ )
ಪ್ರಧಾನ  ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ., ಕೊಳ್ಳೇಗಾಲ.